
# ಕಲಿಯುಗದ ಯಶೋದೆ





ಕಥೆ : ಕೆ. ಅಳಗರಾಜ

ಚಿತ್ರ : ಮಣಿಸೆಲ್ವನ್

1






2





3 ಗೋಪಾಲನಿಗೆ ಸ್ನಾನ ಮಾಡಿಸುವುದು, ತಿನ್ನಿಸುವುದು, ಆಟವಾಡಿಸುವುದು ಹಾಗೂ ಅವನನ್ನು ಸಂತಸದಿಂದ ಇರಿಸುವುದು ಇವನ್ನೆಲ್ಲ ಮಾಡುತ್ತ ಆಕೆ ಅವನ ಸೇವೆ ಮಾಡುತ್ತಿದ್ದಳು. ತಾಯಿ ತನ್ನ ಮಗುವನ್ನು ಆರೈಕೆ ಮಾಡುವಂತೆ ಗೋಪಾಲನನ್ನು ಆಕೆ ಆರೈಕೆ ಮಾಡುತ್ತಿದ್ದಳು. ಆದ್ದರಿಂದ ಉಳಿದವರೆಲ್ಲ ಅವಳನ್ನು 'ಗೋಪಾಲೇರ್ ಮಾ'(ಅಂದರೆ 'ಗೋಪಾಲನ ತಾಯಿ' – ಬಂಗಾಳಿಯಲ್ಲಿ) ಎಂದೇ ಕರೆಯುತ್ತಿದ್ದರು.

4







**7**

ಶ್ರೀರಾಮಕೃಷ್ಣರು ತನ್ನ ಕೈಯಿಂದ ಆಹಾರ ತಿನ್ನಬಯಸಿದ್ದನ್ನು ಅಘೋರಮಣಿ ತಪ್ಪಾಗಿ ಅರ್ಥಮಾಡಿಕೊಂಡಿದ್ದಳು. ಕ್ರಮೇಣ ಅವರ ಪ್ರೀತಿ ಅವಳ ಹೃದಯವನ್ನು ಗೆದ್ದಿತು. ಅವಳಲ್ಲಿ ಅತಿಶಯವಾದ ಆನಂದ ತುಂಬಿಕೊಂಡಿತು.





ಅವಳ ಆಹ್ವಾನದ ಮೇರೆಗೆ ಶ್ರೀರಾಮಕೃಷ್ಣರು ಕಾಮಾರಹಾಟಿಯ ರಾಧಾಕೃಷ್ಣ ಮಂದಿರಕ್ಕೆ ಭೇಟಿಕೊಟ್ಟರು.
ಅಲ್ಲಿ ಅವರು ಭಕ್ತಿಗೀತೆಗಳನ್ನು ಹಾಡಿದರು. ಆಗ ಅಲ್ಲಿದ್ದವರೆಲ್ಲ ಭಕ್ತಿಭಾವದಲ್ಲಿ ಮಿಂದೆದ್ದರು.




ಮುಂದೆ ಒಂದು ದಿನ, ರಾತ್ರಿಹೊತ್ತು ಅಘೋರಮಣಿ ಸಾಧನೆಯಲ್ಲಿ ನಿರತಳಾಗಿದ್ದಳು. ಇದ್ದಕ್ಕಿದ್ದಂತೆ ತನ್ನ ಬಳಿ ಶ್ರೀರಾಮಕೃಷ್ಣರು ಕುಳಿತುಕೊಂಡಿದ್ದುದನ್ನು ಕಂಡು ಅವಳಿಗೆ ಆಶ್ಚರ್ಯವಾಯಿತು. ನಿಧಾನವಾಗಿ ಅವರ ಮೂರ್ತಿ ಬಾಲಗೋಪಾಲನಾಗಿ ಪರಿವರ್ತನೆ ಹೊಂದಿತು. ಆಗ ಅವಳಿಗರ್ಥವಾಯಿತು, ಶ್ರೀರಾಮಕೃಷ್ಣರೇ ತನ್ನ ಬಾಲಗೋಪಾಲ ಎಂಬುದಾಗಿ.

10

ಅವಳಿಗೆ ಆ ಆಧ್ಯಾತ್ಮಿಕ ಅನುಭವವು ಅತ್ಯಂತ ಆನಂದವನ್ನು ನೀಡಿತು. ಅವಳು ಎಲ್ಲವನ್ನೂ ಮರೆತು, 'ಗೋಪಾಲ' ಎಂದು ಕೂಗುತ್ತ ದಕ್ಷಿಣೇಶ್ವರದತ್ತ ಧಾವಿಸಿದಳು.



11




12

ಅಘೋರಮಣಿ ಅತ್ಯುನ್ನತವಾದ ಆಧ್ಯಾತ್ಮಿಕ ಹಂತವನ್ನು ತಲುಪಿದಳು. ಅವಳು ಭಾವಾವೇಶದಲ್ಲಿ ಶ್ರೀರಾಮಕೃಷ್ಣರ ದೇಹದಿಂದ ಬಾಲಗೋಪಾಲನು ಹೊರಬಂದಂತೆ, ಹಾಗೂ ಅವರನ್ನೇ ಪ್ರವೇಶಿಸುವಂತೆ ಕಂಡಳು. ಅವಳು ಆನಂದದಿಂದ ತುಂಬಿತುಳುಕಾಡಿದಳು. ಅವಳನ್ನು ಶ್ರೀರಾಮಕೃಷ್ಣರು ಮತ್ತೆ ಸಾಮಾನ್ಯ ಸ್ಥಿತಿಗೆ ತಂದರು.

13




14


ಒಂದು ಸಲ ಅಘೋರಮಣಿ ತನ್ನ ಆಧ್ಯಾತ್ಮಿಕ ಅನುಭವಗಳನ್ನು ಯುವಕ ನರೇಂದ್ರನಿಗೆ ತಿಳಿಸಿದಳು. ಆಗ ನರೇಂದ್ರನಿಗೆ ಸಾಕಾರ ದೇವರಲ್ಲಿ ನಂಬಿಕೆಯಿಲ್ಲದಿದ್ದರೂ, ಅವಳ ಅನುಭವಗಳನ್ನು ಕೇಳಿದಾಗ ಅವನು ಭಾವಪೂರಿತನಾಗಿ ಕಣ್ಣೀರು ಸುರಿಸಿದ. ಅವಳು ಅವನಿಗೆ ಹೇಳಿದಳು ...



15




16



ತನ್ನ ಕೊನೆಯ ದಿನಗಳಲ್ಲಿ ಅಘೋರಮಣಿ ಶ್ರೀ ಜಗನ್ನಾಥನ ರಥೋತ್ಸವವನ್ನು ನೋಡಲು ಪುರೀಧಾಮಕ್ಕೆ ಹೋದಳು. ರಥಧ ಮೇಲೆ ಜಗನ್ನಾಥನ ಬದಲು ಅವಳು ಬಾಲಗೋಪಾಲನನ್ನು ಕಂಡಳು. ಅದೇ ರೀತಿ ಅವಳು ಬಾಲಗೋಪಾಲನನ್ನು ಎಲ್ಲೆಲ್ಲಿಯೂ ಕಂಡಳು. ಅವಳಿಗೆ ಅವನ ವಿಶ್ವರೂಪ ದರ್ಶನವಾಯಿತು.

17

ಯಶೋದೆಯಂತೆ ಗೋಪಾಲನನ್ನು ತನ್ನ ಮಗುವೆಂದೇ ಭಾವಿಸುವ ಭಕ್ತಿಗೆ ಅವಳು ಅತ್ಯುತ್ತಮ ಉದಾಹರಣೆಯಾದಳು. ಶ್ರೀರಾಮಕೃಷ್ಣರ ನೇರ ಶಿಷ್ಯರೆಲ್ಲರೂ ಅವಳನ್ನು ಗೌರವಿಸುತ್ತಿದ್ದರು. ಅವಳ ಕೊನೆಯ ದಿನಗಳಲ್ಲಿ ಸೋದರಿ ನಿವೇದಿತಾ ಅವಳ ಸೇವೆ ಮಾಡಿದಳು. ಬಾಲಗೋಪಾಲನ ತಾಯಿ, ಈ ಯುಗದ ಯಶೋದೆ 8.07.1906 ರಂದು ಶ್ರೀರಾಮಕೃಷ್ಣರ ಪಾದಗಳನ್ನು ಸೇರಿದಳು.

